ಶ್ರೀ ಕೆ.ಹೆಚ್. ರಂಗನಾಥ್:- ಏನು ಇದೆ, ಅದನ್ನು ಇಟ್ಟಿದ್ದೇನೆ. ಮಾನ್ಯ ಸದಸ್ಯರು ಏನು ಪ್ರಸ್ತಾಪ ಮಾಡಿದ್ದಾರೆ, ಅದನ್ನು ಪರಿಶೀಲನೆ ಮಾಡುತ್ತೇನೆ. ಯಾರದು ಈಗ ತಪ್ಪಾಗಿದೆ, ಉಪ್ಪು ತಿಂದವರು ನೀರು ಕುಡಿಯಬೇಕಾಗುತ್ತದೆ? ಬೇರೆಯವರು ಏತಕ್ಕೆ ಕುಡಿಯಬೇಕು?

ದ.ಅ. ॥ ವರದಿಯನ್ನೊಪ್ಪಿಸುವುದು.

ಶ್ರೀ ಎ. ನಾಗರಾಜ್:- ಮಾನ್ಯ ಅಧ್ಯಕ್ಷರೇ, ಕರ್ನಾಟಕ ವಿದ್ಯುತ್ ಮಂಡಳಿ ಹಾಗೂ ಕರ್ನಾಟಕ ವಿದ್ಯುತ್ ನಿಗಮದ ಕಾರ್ಯನಿರ್ವಹಣೆ ಮತ್ತು ಆಡಳಿತ ದಕ್ಷತೆಯನ್ನು ಉತ್ತಮ ಪಡಿಸುವ ಸಲುವಾಗಿ ಶಿಫಾರಸ್ಸುಗಳನ್ನು ನೀಡುವ ರಚಿಸಲಾಗಿದ್ದ ಜಂಟಿ ಸದನದ ಸಮಿತಿಯ ಮಧ್ಯಂತರ ವರದಿಯನ್ನು ಮಂಡಿಸುತ್ತೇನೆ.

ಅಧ್ಯಕ್ಷರು:- ವರದಿಯನ್ನು ಮಂಡಿಸಲಾಗಿದೆ.

ಶ್ರೀ ಸಿ. ಬೈರೇಗೌಡ:- ಈಗ ಒಪ್ಪಿಸಿರತಕ್ಕಂಥ ವರದಿ ರಾಜ್ಯದ ರೈತರ ದೃಷ್ಟಿಯಿಂದ ಬಹಳ ಮಹತ್ತರವಾದ ವರದಿಯಾಗುತ್ತದೆ. ಆದರಿಂದ ನಾನು ಸರ್ಕಾರವನ್ನು ಇದು ಇವತ್ತಿನಿಂದಲೇ ನಾವು ಏನು ಸಲಹೆ ಮಾಡಿದ್ದೇವೆ. ಅದನ್ನು ದಯವಿಟ್ಟು ಜಾರಿಗೆ ಕೊಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಕಾರಣವೇನೆಂದರೆ ಈ ವಿದ್ಯುತ್‌ನ ಸರಬರಾಜು ಪಂಪುಸೆಟ್ಟುಗಳ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ ಸದನದಲ್ಲಿ. ಚರ್ಚೆಯ ಆಧಾರದ ಮೇಲೆ ಇವತ್ತಿನ ದಿವಸ ಸದನದ ಸಮಿತಿಯನ್ನು ರಚನೆ ಮಾಡಿದ್ದು. ಆ ಸದನದ ಸಮಿತಿ ಇವತ್ತಿನ ದಿವಸ ವರದಿಯನ್ನು ಕೊಟ್ಟಿದೆ. ಇದು ಒಂದು ನಿಮಿಷ ನಿಧಾನವಾದರೂ ಸಹಾ ಇಡೀ ರಾಜ್ಯದಲ್ಲಿ ರೈತರಿಗೆ ಭಾರೀ ಅನಾಹುತವಾಗುತ್ತದೆ. ತಿಂಗಳಾನುಗಟ್ಟಲೆ ರೈತರು ಪಂಪುಸೆಟ್ಟನ್ನು ಚಾಲು ಮಾಡದೇ ಇರತಕ್ಕಂಥ ಪರಿಸ್ಥಿತಿ ಇದೆ. ಕೋಟ್ಯಾಂತರ ರೂಪಾಯಿಗಳ ಬೆಳೆ ಹಾಳಾಗಿದೆ. ಆದ್ದರಿಂದ ಇವತ್ತಿನಿಂದಲೇ ಈ ವರದಿಯನ್ನು ಜಾರಿಗೆ ಕೊಡಬೇಕು ಎಂದು ಹೇಳಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿಸುತ್ತೇನೆ. ಸರ್ಕಾರದವರು ಯಾರಾದರೂ ಇದ್ದರೆ ದಯವಿಟ್ಟು ಇದರ ಬಗ್ಗೆ ಹೇಳಬೇಕು. ಇದು ಬಹಳ ಸಿಂಪಲ್ ಆಗಿದೆ. ಏನೂ ದೊಡ್ಡದು ಇಲ್ಲ. ಈ ಹೈ ಟೆನ್ಷನ್ ಇರತಕ್ಕಂಥವರಿಗೆ ಶೇಕಡ 5 ರಷ್ಟು ಪವರನ್ನು ಕಡಿತ ಮಾಡತಕ್ಕಂಥದ್ದು ಮತ್ತು ನಗರ ಮತ್ತು ಪಟ್ಟಣ ಪ್ರದೇಶದಲ್ಲಿ ಈಗ ಇರತಕ್ಕಂಥ ಒಂದು ವ್ಯತ್ಯಯ ಯಾವ ತರಹ ಇದೆ ಎಂದರೆ ಸರಬರಾಜು ಎಂದರೆ ಬೆಂಗಳೂರು ನಗರದಲ್ಲಿ ಕೇವಲ 45 ನಿಮಿಷ ಮಾತ್ರ ಪವರ್ ಷಟ್ ಡೌನ್ ಮಾಡುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ 6 ರಿಂದ 12 ಗಂಟೆಯಾಗುತ್ತಿದೆ. ಈ ಅನ್ಯಾಯವನ್ನು ಸರಿದೂಗಿಸಿ ಗ್ರಾಮಾಂತರ ಮತ್ತು ನಗರ ಪ್ರದೇಶದಲ್ಲಿ ಸಮಾನವಾಗಿರುವ ಪವರ್ ಷಟ್ ಡೌನನ್ನು ಆಳವಡಿಸಬೇಕು

ಇಷ್ಟೆ ವರದಿಯಲ್ಲಿರತಕ್ಕಂಥದು. ತಾವು ಸರ್ಕಾರಕ್ಕೆ ಕೇಳಬೇಕು. ಇದನ್ನು ತಕ್ಷಣ ಜಾರಿ ಕೊಡಬೇಕು ಎಂದು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ. ಇದನ್ನು ಜಾರಿ ಕೊಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆ, ಅನ್ಯಾಯವಾಗುತ್ತದೆ. ಕಳೆದ ಮೂರು ನಾಲ್ಕು ತಿಂಗಳಿಂದ ಅನ್ಯಾಯವಾಗಿದೆ, ಈ ಅನ್ಯಾಯವನ್ನು ಇವತ್ತಿಂದಲಾದರೂ ಸರಿದೂಗಿಸಬೇಕು ಎಂದು ನಾನು ತಮ್ಮ ಮೂಲಕ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಆರ್.ವಿ.ದೇಶಪಾಂಡೆ:- ಇದು ಇಂಟರಿಮ್ ರಿಪೋರ್ಟ್ ಇದೆ. ಅದನ್ನು ಅವರು ಓದಿ ಹೇಳಬೇಕು. ಮಾನ್ಯ ಬೈರೇಗೌಡರಿಗೆ ಮಾಹಿತಿ ಗೊತ್ತಿದೆ. ಈ ಸಮಿತಿಯ ಸದಸ್ಯರು ಅವರು. ಹಾಗಾಗಿ ಅವರು ಹೇಳಿದರು, ನಾನೂ ಅದನ್ನು ಸಪೋರ್ಟ್ ಮಾಡುತ್ತೇನೆ, ಏಕೆಂದರೆ ರೈತರು ಬಹಳ ಕಷ್ಟದಲ್ಲಿದ್ದಾರೆ. ಹೈ ಟೆನ್ಷನ್ ಮೇಲೆ 5 ಪರ್‌ಸೆಂಟ್ ಪುನಃ ಪವರ್ ಕಟ್ ರೆಕಮೆಂಡ್ ಮಾಡಿದ್ದಾರೆ. ನಾನು ಸಂಕ್ಷಿಪ್ತದಲ್ಲಿ ನೋಡಿದ್ದೇನೆ. ಮತ್ತು ಷಟ್ ಡೌನ್ ಏನು ಮಾಡುತ್ತಾರೆ, ಆದರಿಂದ ಪಟ್ಟಣದಲ್ಲಿ ಜನರಿಗೆ ಅಷ್ಟು ಕಷ್ಟವಿಲ್ಲ. ಹಳ್ಳಿಯಲ್ಲಿ ಆರು ಗಂಟೆ, ಹನ್ನೊಂದು ಗಂಟೆ ದಿವಸ ಕಟ್ ನಡೆಯುತ್ತಿರುತ್ತದೆ. ಹಾಗಾಗಿ ಪಟ್ಟಣದಲ್ಲಿ ಮತ್ತು ಹಳ್ಳಿಯಲ್ಲಿ ಸಮಾನ್ಯವಾಗಿ ನಡೆಯಬೇಕು. ಇಲ್ಲಿ ಎಷ್ಟು ಮಾಡುತ್ತೀರಿ, ಅಷ್ಟೇ ಹಳ್ಳಿಯಲ್ಲಿ ಮಾಡಬೇಕು ಎಂದು ಏನು

ವರದಿ ಕೊಟ್ಟಿದ್ದಾರೆ, ಅದು ಸೂಕ್ತವಾದ ವರದಿ ಇದೆ. ಹಾಗಾಗಿ ಇದಕ್ಕೆ ಪವರ್ ಮಿನಿಸ್ಟರ್ ಅವರನ್ನು ತಾವು ಇಮ್ಮೆಡಿಯೇಟ್ ಆಗಿ ಕರೆಯಿಸಿ ಅವರ ಕಡೆಯಿಂದ, ಇದನ್ನು ಸರ್ಕಾರದವರು ಒಪ್ಪುತ್ತಾರೆ ಎಂದು ಹೇಳಿಸಬೇಕು. ಏಕೆಂದರೆ ರೈತರು ಬಹಳ ಕಷ್ಟದಲ್ಲಿದ್ದಾರೆ. ರೈತರ ಎಲ್ಲಾ ಬೆಳೆ ನಾಶವಾಗಿದೆ. ಇಂಥ ಪರಿಸ್ಥಿತಿಯಲ್ಲಿ ಈಗಾಗಲೇ ಇಂಟೆರಿಮ್ ರಿಪೋರ್ಟ್‌ನ್ನು ಏನು ಕೊಟ್ಟಿದ್ದಾರೆ. ಅದು ಬಹಳ ಸೂಕ್ತ ಇದೆ. ಅದನ್ನು ಇಂಪ್ಲಿಮೆಂಟ್ ಮಾಡಿದರೆ ರೈತರಿಗೆ ಅನುಕೂಲವಾಗಬಹುದು. ಹಳ್ಳಿಯ ಜನರಿಗೂ ಅನುಕೂಲವಾಗಬಹುದು. ಪಟ್ಟಣ ಪ್ರದೇಶದ ಜನರಿಗೆ ಹೆಚ್ಚಿನ ಸೌಲಭ್ಯಗಳು ಸಿಗುತ್ತಿವೆ, ನಮಗೆಲ್ಲಾ ಅನ್ಯಾಯವಾಗುತ್ತಿದೆ ಎನ್ನುವ ಭಾವನೆ ಇವತ್ತು ಗ್ರಾಮಾಂತರ ಪ್ರದೇಶದ ಜನರಲ್ಲಿ ಇದೆ. ನಾವೆಲ್ಲರೂ ಗ್ರಾಮಾಂತರ ಪ್ರದೇಶ ಅಭಿವೃದ್ಧಿಯಾಗಬೇಕು ಎಂದು ಹೇಳುತ್ತೇವೆ. ಆದರೆ ಗ್ರಾಮಾಂತರ ಪ್ರದೇಶ ಅಭಿವೃದ್ಧಿ ಹೇಗೆ ಆಗಬೇಕು? ಗ್ರಾಮಾಂತರ ಪ್ರದೇಶದಲ್ಲಿ ಕೈಗಾರಿಕೆ ಶುರು ಮಾಡಬೇಕು ಎಂದು ಹೇಳುತ್ತೇವೆ, ಕೈಗಾರಿಕೆ ಶುರು ಮಾಡಿದರೆ ಅಲ್ಲಿ ಪವರ್ ಷಟ್ ಡೌನ್. ಅಲ್ಲಿ ವಿದ್ಯುಚ್ಛಕ್ತಿ ಇಲ್ಲ. ಆದ್ದರಿಂದ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ನಿಜವಾಗಿ ಆಗಬೇಕು ಎಂದು ಸರ್ಕಾರದ ಇಚ್ಛೆ ಇದ್ದರೆ ಈ ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡಬೇಕು. ಈ ಒಂದು ವಿಷಮತೆ ಏನು ಇದೆ ಅದು ಹೋಗುತ್ತದೆ, ಹಾಗೂ ಗ್ರಾಮಾಂತರ ಪ್ರದೇಶದ ಸರ್ವಾಂಗೀಣ ಅಭಿವೃದ್ಧಿ ಆಗುವುದಕ್ಕೆ ಸಹ ಅನುಕೂಲವಾಗುತ್ತದೆ. ಆ ದೃಷ್ಟಿಯಿಂದ ಸರ್ಕಾರ ತಕ್ಷಣ ಈ ವರದಿಯನ್ನು ಜಾರಿಗೆ ತರಬೇಕು ಎಂದು ನಾನು ಒತ್ತಾಯಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಮಧ್ಯಂತರ ವರದಿಯನ್ನು ಸಮಿತಿಯವರು ಕೊಟ್ಟಿದ್ದಾರೆ. ಈ ಸಮಿತಿಯನ್ನು ರಚಿಸಬೇಕೆಂದು ಈ ಸದನದಲ್ಲಿ ನಾವೆಲ್ಲಾ ಪಕ್ಷಭೇದ ಮರೆತು ಒತ್ತಾಯ ಮಾಡಿ ಮಾಡಿದ್ದಾಯಿತು. ಆದರೆ ಈಗ ಈ ವರದಿಯನ್ನು ಮಂಡಿಸುವಾಗ ಆ ಸಚಿವರು ಇರಬೇಕು ಎನ್ನತಕ್ಕ ಪ್ರಶ್ನೆ ಇಲ್ಲದೇ ಇದ್ದರೂ ಸಹ ಆದರೂ ಆ ಸಚಿವರು ಇದ್ದಿದ್ದರೆ ಚೆನ್ನಾಗಿತ್ತು, ಮಾನ್ಯ ಮುಖ್ಯಮಂತ್ರಿಗಳು ಇದ್ದರೆ ಚೆನ್ನಾಗಿತ್ತು. ಉಪ ಮುಖ್ಯಮಂತ್ರಿಗಳು ಇದ್ದರೆ ಬಹಳ ಚೆನ್ನಾಗಿತ್ತು, ಸಂಬಂಧಪಟ್ಟ ಸಚಿವರು ಉಪ ಮುಖ್ಯಮಂತ್ರಿಗಳು ಇದು ಬಹಳ ಸಾಧುವಾದ ವರದಿಯನ್ನು ನೀಡಿದ್ದಾರೆ ಎಂದು ನನಗೆ ಅನ್ನಿಸುತ್ತದೆ. ಅವರು ವರದಿಯನ್ನು ಓದಿದ ನಂತರ ಇದರ ಬಗ್ಗೆ ನಾವು ಚರ್ಚೆ ಮಾಡೋಣ. ಆದರೆ ನಾನು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಈ ವರದಿ ಈ ಸದನದಲ್ಲಿ ಮಂಡಿಸಿ ಅಷ್ಟಕ್ಕೇ ನಿಲ್ಲಬಾರದು. ಅತ್ಯಂತ ಪ್ರಮುಖವಾಗಿ ಜಾಗರೂಕತೆಯಿಂದ ಆತಿ ಬೇಗ ಈ ಒಂದು ಮಧ್ಯಂತರ ವರದಿಯನ್ನು ಕೊಟ್ಟಿದ್ದಾರೆ. ಇದು ಕೂಡತಕ್ಕ ಉದ್ದೇಶ ಏನು ಎಂದರೆ ರಾಜ್ಯದಲ್ಲಿ, ರೈತರು ವಿದ್ಯುಚ್ಛಕ್ತಿ ಬಗ್ಗೆ ಪಡತಕ್ಕ ಕಷ್ಟವನ್ನು ಅರಿತು ಒಂದು ಪರಿಹಾರವನ್ನು ಮಧ್ಯಂತರ ವರದಿಯಲ್ಲಿ ನೀಡಲಾಗಿದೆ. ಈ ವರದಿಯನ್ನು ಸರ್ಕಾರ ಕಡೆಗಾಣಿಸಬಾರದು. ಯಾವ ಕ್ಷಣದಲ್ಲಿ ಈ ಸದನದಲ್ಲಿ ವರದಿಯನ್ನು ಮಂಡಿಸುತ್ತಿದ್ದಾರೆ, ಈ ಕ್ಷಣದಿಂದಲೇ ಈ ವರದಿಯನ್ನು ಜಾರಿ ಮಾಡಬೇಕೆಂದು ತಮ್ಮ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಇದರ ಹಿಂದೆ ಮುಂದೆ, ಒಂದು ನಿಮಿಷವೂ ಹೋಗಬಾರದು. ಆ ರೀತಿ ಹೋಗುವುದಾದರೆ ರೈತರಿಗೆ ಅತ್ಯಂತ ನೋವಾಗುತ್ತದೆ, ತೊಂದರೆಗೆ ಸಿಗುತ್ತಾರೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದೇನೆ. ಏಕೆ ಇಷ್ಟು ಬೇಗ ವರದಿಯನ್ನು ಕೊಡಬೇಕಾಗಿತ್ತು ? ರೈತರ ಪರಿಸ್ಥಿತಿಯನ್ನು ನೋಡಿ ಈ ತೊಂದರೆ ನೋಡಿ ಮಾಡಬೇಕಾಗಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ :- ಮಾನ್ಯ ಅಧ್ಯಕ್ಷರೆ.

ಅಧ್ಯಕ್ಷರು :- ನಾನು ವೆಂಕಟಪ್ಪನವರನ್ನು ಕರೆದಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೆ, ಈ ವರದಿಯನ್ನು ಏನು ಮಂಡಿಸುತ್ತಿದ್ದಾರೆ, ಅದಕ್ಕೆ ನಾವು ಬಹಳ ಸಂತೋಷ ಪಡುತ್ತಿದ್ದೇವೆ. ಆದರೆ ಈ ವರದಿಯನ್ನು ಕೂಡಲೇ ಜಾರಿ ಪಡಿಸತಕ್ಕ ಒತ್ತಾಯವನ್ನು ತಾವೂ ಮಾಡಬೇಕು, ನಾವೂ ಮಾಡಬೇಕು. ಇದು ಪಕ್ಷಾತೀತವಾಗಿ ಮಾಡಬೇಕಾದ ಪ್ರಶ್ನೆ.

ಶ್ರೀ ಎಂ.ವಿ. ವೆಂಕಟಪ್ಪ:- ನಾವು ಯಾವುದಕ್ಕೋಸ್ಕರವಾಗಿ ಎಷ್ಟು ಅವಸರವಾಗಿ ಈ ವರದಿಯನ್ನು ಕೊಟ್ಟಿದ್ದೇವೆ ಎಂದು ಹೇಳಿದರೆ, ಕಾರಣ ಇಷ್ಟೇ.

(ಗೊಂದಲ)

ಶ್ರೀ ಎಂ.ವಿ. ವೆಂಕಟಪ್ಪ:- ಮಾತನಾಡದೇ ಇದ್ದರೆ ಆಗುವುದಿಲ್ಲ ಸಾರ್. ಬೇಕಾದರೆ ಮೆಂಬರ್‌ಶಿಪ್‌ಗೆ ರಾಜೀನಾಮೆ ಕೊಡುತ್ತೇನೆ. ನಾನು ಮಾತನಾಡಬೇಕು ಇಲ್ಲಿ. ನಮ್ಮ ಜನ ಏನೆನ್ನುತ್ತಾರೆ. ನಮ್ಮ ಕಾನ್‌ಸ್ಟಿಟ್ಯುಯೆನ್ಸಿ ಜನ ? ನೀವು ಏನ್ರಿ ಮಲಗಿಕೊಂಡು ನಿದ್ದೆ ಹೋಗುತ್ತಿದ್ದೀರಾ ಎಂದು ಹೇಳುತ್ತಾರೆ. ಡೈಲಿ ಬೈರೇಗೌಡರ ಹೆಸರೇ ಬರುತ್ತಿದೆ; ಪೇಪರ್‌ನಲ್ಲಿ

ಶ್ರೀ ಸಿ. ಬೈರೇಗೌಡ:- ಪ್ರೆಸ್‌ನವರೆ ನನ್ನ ಹೆಸರು ಹಾಕಬೇಡಿ.

ಶ್ರೀ ಆರ್.ವಿ. ದೇಶಪಾಂಡೆ:- ಈಗ ಒಂದು ಕೆಲಸ ಮಾಡಿ. ಕಾನ್‌ಸ್ಟಿಟ್ಯುಯೆನ್ಸಿಯಲ್ಲಿ ಏನೂ ಆಗುವುದಿಲ್ಲ. ಆ ವರದಿ ಕಾಪಿ ತೆಗೆದುಕೊಂಡು ಹೋಗಿ, ಅದರಲ್ಲಿ ನಿಮ್ಮ ಹೆಸರು ಇದೆ. ಕ್ಯಾಶುಯಲ್ ಹೇಳಿ ನಾನೇ ವರದಿ ಕೊಟ್ಟಿದ್ದು, ನನ್ನ ಹೆಸರು ಇದೆ ಎಂದು ತೋರಿಸಿ, ಅದು ಇಷ್ಟು ಖರ್ಚಾಗುವುದಿಲ್ಲ.

ಶ್ರೀ ಎಂ.ವಿ. ವೆಂಕಟಪ್ಪ:- ಎರಡು ಲಕ್ಷ ಕಾಪೀಸ್ ಪ್ರಿಂಟ್ ಮಾಡಬೇಕು, ಪ್ರಿಂಟ್ ಮಾಡಿಸಿಕೊಡುತ್ತೀರಾ? ಹೇಳಿ. ಇಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಹೇಳುತ್ತೇನೆ. ಎಸ್‌ಪೆಷಲಿ ರಾಜ್ಯದಲ್ಲಿನ ಎಂಟೂವರೆ ಲಕ್ಷ ಪಂಪ್‌ಸೆಟ್ಟುಗಳಲ್ಲಿ, ಕೋಲಾರ, ಬೆಂಗಳೂರು ರೂರಲ್, ಚಿತ್ರದುರ್ಗ, ತುಮಕೂರಿನಲ್ಲಿ ಸ್ವಲ್ಪ ಹೆಚ್ಚು ಕಡಿಮೆ ನಾಲ್ಕು ಲಕ್ಷ ಪಂಪ್‌ಸೆಟ್ಟುಗಳು ಇವೆ. ಇಲ್ಲಿ ಆಲೂಗೆಡ್ಡೆ, ಮೆಣಸಿನಕಾಯಿ, ರೇಷ್ಮೆ, ಮತ್ತು ಟೊಮೋಟೋ ಬೆಳೆಯುತ್ತಾರೆ. ನಮ್ಮ ಜಿಲ್ಲೆಯಲ್ಲಿ 20 ಸಾವಿರ ಎಕರೆ ಟೊಮೋಟೋ ಹಾಕಿದ್ದಾರೆ. ನೀವು ಏನಾದರೂ ಕರೆಕ್ಟಾಗಿ ಪ್ರಾಪರ್ ಆಗಿ ವೋಲ್ಟೇಜ್ ಕೊಡದೇ ಇದ್ದರೆ ಎಲ್ಲಾ ಬೆಳೆ ನಾಶವಾಗುತ್ತದೆ. ಸ್ವಲ್ಪ ಹೆಚ್ಚು ಕಡಿಮೆ ಒಂದು ಹತ್ತು ಕೋಟಿ ರೂಪಾಯಿ ಟೊಮೆಟೋ ಬೆಳೆ ಇದೆ. ನಮ್ಮ ಜಿಲ್ಲೆಯಿಂದ ಪ್ರತಿ ದಿನ 300 ರಿಂದ 400 ಟನ್ ಟೊಮೆಟೋ ಮದ್ರಾಸ್, ಪೂನಾ, ಬೆಂಗಳೂರಿಗೆ ಹೋಗುತ್ತದೆ. ಇದು ಹೋದರೆ ರೈತರಿಗೆಲ್ಲಾ ತೊಂದರೆ ಆಗುತ್ತದೆ. ಸಾಧ್ಯವಾದರೆ ನಾಳೆ ಬೆಳಿಗ್ಗೆಯಿಂದಲೇ ಅವರು ರಿಪೋರ್ಟ್‌ನ್ನು ಇಂಪ್ಲಿಮೆಂಟ್ ಮಾಡಿಬಿಟ್ಟರೆ ನಮಗೆಲ್ಲಾ ಬೇಕಾಗಿರುವುದು ಒಂದು ತಿಂಗಳು, ಒಂದೂವರೆ ತಿಂಗಳು ಅಷ್ಟೆ. ಒಂದು ಸಲ ಮಳೆ ಪ್ರಾರಂಭ ಆಯಿತು ಎಂದರೆ ನಿಮ್ಮ ಕರೆಂಟ್‌ನ್ನು ಯಾರು ಕೇಳುವುದಿಲ್ಲ. ಇನ್ನೇನು ಮುಂಗರು ಮಳೆ ಪ್ರಾರಂಭ ಆಗಿದೆ. ಆದರೂ ಸಹ ಒಂದು ತಿಂಗಳು ನಮಗೆ ಅಚೆಸ್ಟ್ ಮಾಡಿ ಈ ಟೌನ್‌ಗಳಲ್ಲಿ ಹೆಚ್ಚಾಗಿ ಕಟ್ ಮಾಡಿ ನಮಗೆ ಕೊಡಬೇಕು ಎಂದು ಹೇಳುತ್ತಿದ್ದೇನೆ. ದಯವಿಟ್ಟು ನಾಳೆಯಿಂದಲೇ ನೀವು ಇದನ್ನು ಚಾರಿಗೆ ತರಬೇಕು.

ಶ್ರೀ ಬಿ.ಹೆಚ್.ಬನ್ನಿಕೋಡ್:- ಮಾನ್ಯ ಅಧ್ಯಕ್ಷರೇ, ಗ್ರಾಮೀಣ ಪ್ರದೇಶದಲ್ಲಿ

ಅಧ್ಯಕ್ಷರು:- ಇದರ ಮೇಲೆ ಚರ್ಚೆ ಮಾಡಬೇಕೋ ಇಲ್ಲವೋ ಕೇಳಿ. ಏರೀ ನಮ್ಮ ಕಡೆ ನೋಡಿ ಎಂದರೆ ನಿಮ್ಮ ಕಡೆ ನಾನು ನೋಡುತ್ತಿದ್ದೇನೆ.

(ಗೊಂದಲ)

ಅಧ್ಯಕ್ಷರು:- ಸರ್ಕಾರದ ಮೇಲೆ ಒತ್ತಾಯ ತಂದು ಆದಷ್ಟು ಬೇಗ ಇದನ್ನು ಇಂಪ್ಲಿಮೆಂಟ್ ಮಾಡಬೇಕು ಎಂದು ತಮ್ಮ ಅಭಿಪ್ರಾಯ ಇದೆ. ಅದಕ್ಕೆ ಎಲ್ಲರೂ ಚರ್ಚೆ ಮಾಡುವುದಕ್ಕೆ ಹೊರಟರೆ ಅದಕ್ಕೆ ಬಹಳ ಸಮಯ ಹೋಗುತ್ತದೆ. ನಾನು ಮಂತ್ರಿಗಳನ್ನು ಕರೆಯಿಸುವುದಕ್ಕೆ ಹೇಳಿದ್ದೇನೆ. ಆದಷ್ಟು ಬೇಗ..

ಶ್ರೀ ಕಾಗೋಡು ತಿಮ್ಮಪ್ಪ:- ಅಧ್ಯಕ್ಷರೇ, ಈಗ ವರದಿ ಬಂದಿದೆ. ಈ ವರದಿಯನ್ನು ಕಾರ್ಯಗತ ಮಾಡಬೇಕೆಂದು ಸದಸ್ಯರುಗಳು ಒತ್ತಾಯ ಮಾಡುತ್ತಿದ್ದಾರೆ. ಆದರೆ ವರದಿ ಕೊಡುವಾಗ ಶ್ರೀಮಾನ್

ಬೈರೇಗೌಡರು ಇವರೆಲ್ಲಾ ಸೇರಿ ಬಹಳ ದಿವಸದಿಂದ ವಿದ್ಯುಚ್ಛಕ್ತಿ ಸರಬರಾಜು ಬಗ್ಗೆ ಅದರಲ್ಲಿಯೂ ಕೃಷಿಕರಿಗೆ ತೊಂದರೆ ಆಗುತ್ತಿರುವುದರ ಬಗ್ಗೆ ಬಹಳ ಕಳಕಳಿಯಿಂದ ಚರ್ಚೆಯನ್ನು ಮಾಡಿದ್ದರು. ಇವರ ಈ ಚರ್ಚೆಯ ಗರ್ಭದಿಂದ ಅಮೃತ ಹೊರಗೆ ಬರುತ್ತದೆ ಎಂದು ನಾನು ತಿಳಿದುಕೊಂಡಿದ್ದರೆ ಇಲ್ಲಿ ಬಂದಿರುವುದನ್ನು ನೋಡುವುದಕ್ಕೆ ಹೋದರೆ ಇದರಲ್ಲಿ ಏನು ಇಲ್ಲ.

ಶ್ರೀ ಸಿ.ಬೈರೇಗೌಡ:- ಮುಂದೆ ರಿಪೋರ್ಟ್ ಕೊಡುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ :- ನೀವು ಚರ್ಚೆ ಮಾಡುತ್ತಿದ್ದುದು ಏನು? ಕೋಲಾರದಲ್ಲಿ ಹಾಗೆ ಇದೆ, ತುಮಕೂರ್‌ನಲ್ಲಿ ಹೀಗೆ ಆಗಿದೆ, ಬರುವುದಿಲ್ಲ. ಈಗ ನಿನ್ನೆ ಕನ್ನಡವನ್ನು ಚಾರಿಗೆ ನಾಳೆಯಿಂದ ತರಬೇಕು ಎಂದು ವಾಟಾಳ್ ನಾಗರಾಜ್ ಅವರು ಎಲ್ಲ ಕನ್ನಡ ಬೋರ್ಡ್‌ಗೆ ಬರೆದಿದ್ದೇ ಬರೆದದ್ದು. ಅದರೆ ಇಲ್ಲಿ ಏನು ಮಾಡಿದ್ದಾರೆ. ಡಿಮ್ಯಾಂಡ್, ಎನರ್ಜಿ ಈ ಪದ ಏಕೆ ಬಳಸಿದ್ದೀರಿ? ಡಿಮ್ಯಾಂಡ್ ಅಂಡ್ ಎನರ್ಜಿ ಎಂದು ಆ ಪದಗಳನ್ನು ಏಕೆ ಬಳಸಿದ್ದೀರಿ? ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಶ್ರೀಮಾನ್ ಬೈರೇಗೌಡರು ಹಾಗೂ ವಿದ್ಯುಚ್ಛಕ್ತಿ ತೊಂದರೆ ಅನುಭವಿಸುವಂಥ ಪ್ರದೇಶಗಳ ಜನರೆಲ್ಲರೂ ಸೇರಿ ಕುಳಿತು ಚರ್ಚಿಸಿ, ಇದರ ಬಗ್ಗೆ ಆಳವಾಗಿ ಅಭ್ಯಾಸ ಮಾಡಿ ಅತ್ಯಂತ ಉಪಯುಕ್ತವಾದ ಸಲಹೆ ನೀಡುತ್ತಾರೆಂದು ನಾನು ತಿಳಿದುಕೊಂಡಿದ್ದರೆ, ಬರಿ ಹೈ ಟೆನ್‌ಷನ್ ಬಳಕೆದಾರರಿಗೆ ಕಡಿಮೆ ಮಾಡಿ ಎಂದು ಹೇಳುವುದಕ್ಕೆ ಈ ವರದಿ ಬೇಕಾಗಿತ್ತೇ? ದೊಡ್ಡ ಸಭೆ ಮಾಡಿದಿರಿ, ಏನು ಕಾರಣ? ಒಂದು ಕಡೆ 'ಇದಕ್ಕೆಲ್ಲಾ ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳೇ ಹೊಣೆಗಾರರು' ಎಂದು ಹೇಳುವುದು, ಇನ್ನೊಂದು ಕಡೆ ಅವರನ್ನು ಸಾರಾಸಗಟಾಗಿ ಟೀಕೆ ಮಾಡುವುದು. ಆದುದರಿಂದ, ನಾನು ಕೇಳುತ್ತಿದ್ದೇನೆ: ಇದು ಅಧಿಕಾರಿಗಳ ಕಡೆಯಿಂದ ಆಗುತ್ತಿದೆಯೆ? ಇಲ್ಲವೆ ತಾಂತ್ರಿಕ ಲೋಪ-ದೋಷಗಳಿಂದ ಆಗುತ್ತಿದೆಯೆ? ಇದನ್ನು ಬದಲಾವಣೆ ಮಾಡಿದರೆ ಏನಾಗುತ್ತದೆ? ಎನ್ನುವುದರ ಬಗ್ಗೆ ಸ್ವಲ್ಪ ಆಳವಾಗಿ ಅಭ್ಯಸಿಸಿ, ನಿರ್ದಿಷ್ಟವಾಗಿ ಚರ್ಚಿಸಿ ತಾಂತ್ರಿಕತೆಯನ್ನು ಕಂಡುಹಿಡಿದು ಇದಕ್ಕೆ ವಿದ್ಯುಚ್ಛಕ್ತಿ ಮಂಡಳಿಯ ನೌಕರರಿಂದ ಏನಾದರೂ ತೊಂದರೆಯಿದ್ದಲ್ಲಿ, ಅದನ್ನು ಕಂಡುಹಿಡಿದು ಹೇಳಿರಿ ಎಂದರೆ, ಇದುವರೆವಿಗೂ ಚರ್ಚೆ ಮಾಡಿದ್ದೆಲ್ಲವೂ 'ವಿದ್ಯುಚ್ಛಕ್ತಿ ಮಂಡಳಿಯ ಅಧಿಕಾರಿಗಳು ಬಹಳ ಲೋಪ ಮಾಡಿದ್ದಾರೆ, ಇದು ಅವರಿಂದರಲೇ ನಡೆಯುತ್ತಿದೆ, ಕದಿಯುವುದು ಅವರೇ, ಆದ್ದರಿಂದ ಅವರ ಮನಸ್ಸಿಗೆ ಬಂದಂತೆ ಅಲ್ಲಿ ಷಟ್ ಡೌನ್ ಮಾಡುತ್ತಾರೆ' ಎಂದು ಹೇಳುತ್ತಿದ್ದೀರಿ. ಆದುದರಿಂದ, ಇವೊತ್ತು ನಾವೇನು ನಿರೀಕ್ಷಿಸಿದ್ದೆವು, ಅದನ್ನು ಇವರು ಮಾಡಲಿಲ್ಲವೆಂಬುದಷ್ಟೆ ನನ್ನ ಅಭಿಪ್ರಾಯ.

ಶ್ರೀ ಸಿ. ಬೈರೇಗೌಡ:- ಮಾನ್ಯ ಕಾಗೋಡು ತಿಮ್ಮಪ್ಪನವರು ಹೇಳಿರತಕ್ಕಂಥ ಪ್ರತಿಯೊಂದು ಅಂಶವೂ ಕೂಡ ನನಗೆ ಗೊತ್ತಿದೆ ಏಕೆಂದರೆ, ನಾನು ಆ ಸಮಿತಿಯ ಸದಸ್ಯನಾಗಿರುವುದರಿಂದ ಪ್ರತಿಯೊಂದು ಅಂಶವನ್ನೂ ಕೂಡ ಮುಂದೆ ನಾವು ಪರಿಶೀಲಿಸುತ್ತೇವೆ. ಅವರು ಏನು ಹೇಳಿದ್ದಾರೆ, ಅದರ ಬಗ್ಗೆ ಗಂಭೀರ ಆಸಕ್ತ ವಹಿಸಿ ಖಂಡಿತಾ ಮಾಡುತ್ತೇವೆ ಎನ್ನತಕ್ಕಂಥ ಆಶ್ವಾಸನೆಯನ್ನು ಮಾನ್ಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಿಗೆ ಕೊಡುತ್ತೇನೆ. ಇದರ ಬಗ್ಗೆ ಮಧ್ಯಂತರ ವರದಿಯನ್ನು ಏಕೆ ಕೊಡಬೇಕಾಯಿತೆಂದರೆ, ಇವೊತ್ತು ಈ ನಿಮಿಷದಲ್ಲಿ ಇರತಕ್ಕಂಥ ಕೆಟ್ಟ ಪರಿಸ್ಥಿತಿ ಏನಿದೆ, ಕಳೆದ 2-3 ತಿಂಗಳಿಂದ ರೈತರು ಅನುಭವಿಸತಕ್ಕಂಥ ಕಷ್ಟ-ನಷ್ಟಗಳೇನಿವೆ, ಅದಕ್ಕೆ ತಾತ್ಕಾಲಿಕ ಪರಿಹಾರ ಕೊಡುವುದಕ್ಕೆ ಈ ವರದಿ ಸಲ್ಲಿಸಲಾಗಿದೆಯೇ ವಿನಹ ಇದು ಪೂರ್ತಿಯಾದಂಥ ವರದಿಯಲ್ಲ. ವರದಿ ತಾತ್ಕಾಲಿಕವಾಗಿರುವುದರಿಂದ ಇವೊತ್ತು, ಈ ನಿಮಿಷದಲ್ಲಿ, ಈ ಕ್ಷಣದಲ್ಲಿ ಇರತಕ್ಕಂಥ ಕಷ್ಟಗಳನ್ನು ಪರಿಹರಿಸುವುದಕ್ಕೆ ತಾತ್ಕಾಲಿಕ ಪರಿಹಾರ ನೀಡುತ್ತಿದ್ದೇವೆಯೇ ಹೊರತು, ಇದರ ಬಗ್ಗೆ ಪೂರ್ತಿಯಾಗಿ ಚರ್ಚೆ ಮಾಡುವುದಕ್ಕೆ ಅವಕಾಶವಾಗಿಲ್ಲ, ಪೂರ್ತಿಯಾಗಿ ಚರ್ಚೆ ಮಾಡುತ್ತೇವೆ. ಅವರು ಹೇಳಿರತಕ್ಕಂಥ ಪ್ರತಿಯೊಂದು ಅಂಶಗಳನ್ನು ನಾವು ಗಮನಿಸುತ್ತೇವೆ. ಆ ದೃಷ್ಟಿಯಿಂದ ಈ ಸಮಿತಿ ರಚನೆಯಾಗಿದೆಯೆಂಬ ವಿಷಯವನ್ನು ನಾನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಬಿ.ಎಚ್. ಬನ್ನಿಕೋಡ್ :- ಇವೊತ್ತು ಕೊಟ್ಟಿರುವ ವರದಿ ಪೂರ್ತಿ ವರದಿಯಲ್ಲ, ತಾತ್ಕಾಲಿಕ ವರದಿ ಕೊಟ್ಟಿದ್ದಾರೆ. ಸಮಯಕ್ಕೆ ಸರಿಯಾಗಿ ಏನು ವರದಿ ಕೊಟ್ಟಿದ್ದಾರೆ, ಅದು ರೈತರಿಗಾಗಿರುವ ತೊಂದರೆಯನ್ನು ಹೇಗೆ ನಿವಾರಿಸಬೇಕೆಂದು ವರದಿಯಲ್ಲಿ ತಿಳಿಸಿದ್ದಾರೆ. ಆದುದರಿಂದ, ತಾತ್ಕಾಲಿಕ ವರದಿಯಲ್ಲಿರುವಂತೆ ಸರ್ಕಾರ ಕೂಡಲೇ ಜಾರಿಗೆ ತರಬೇಕು.

ಶ್ರೀ ಕೆ.ಎಚ್. ರಂಗನಾಥ್ :- ಮಾನ್ಯ ಉಪ ಮುಖ್ಯಮಂತ್ರಿಗಳು ಮೇಲ್ಮನೆಯಲ್ಲಿ ಬೇಡಿಕೆಗಳಿಗೆ ಉತ್ತರ ಕೊಡುತ್ತಿದ್ದಾರೆ. ಬಹುಶಃ ಇದನ್ನು ಅವರು ನೋಡಿದ್ದಾರೋ, ಇಲ್ಲವೋ ಗೊತ್ತಿಲ್ಲ. ಇಲ್ಲಿ ಮಂಡಿಸಿರತಕ್ಕಂಥ ವರದಿಯ ವಿಚಾರವನ್ನು ನಾನು ಅವರ ಗಮನಕ್ಕೆ ತರುತ್ತೇವೆ. ಇದರ ಬಗ್ಗೆ ಇವೊತ್ತು ಅಥವಾ ನಾಳೆ ಉತ್ತರ ಕೊಡುವುದಕ್ಕೆ ಅವರಿಗೆ ಅವಕಾಶ ಮಾಡಿಕೊಡಬೇಕು..... ತಿಮ್ಮಪ್ಪನವರು ಹೇಳುತ್ತಿದ್ದಾರಲ್ಲಾ, ವರದಿಯಲ್ಲಿ ಕನ್ನಡದ ಎನರ್ಜಿ ಕೂಡ ಕಟ್ ಆಗಿದೆ.

ಶ್ರೀ ವಾಟಾಳ್ ನಾಗರಾಜ್ :- ತಮಗೆ ಏನೂ ಸಿಗಲಿಲ್ಲವೆಂದು ತಿಮ್ಮಪ್ಪನವರು ಇಲ್ಲೆಲ್ಲಿಗೋ ಬಂದಿದ್ದಾರೆ. ತಿಮ್ಮಪ್ಪನವರೇ, ಸಮುದ್ರದಲ್ಲಿ ಈಜಿರಿ. ಹೀಗಾದರೆ ಹೇಗೆ? ನಾವು ಅದನ್ನು ಒಪ್ಪಿದ್ದೇವೆಂದು ಹೇಳಲಿಲ್ಲ, ಎಲ್ಲಾದರೂ ಉಂಟೇ?

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಶಾಸನ ರಚನಾ ಕಾರ್ಯ ಕಲಾಪಗಳು.

1993ರ ಕರ್ನಾಟಕ ಭೂ ಕಂದಾಯ(ತಿದ್ದುಪಡಿ)ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಂ.ರಾಜಶೇಖರಮೂರ್ತಿ(ಕಂದಾಯ ಮಂತ್ರಿಗಳು): ಮಾನ್ಯ ಉಪಾಧ್ಯಕ್ಷರೆ,

1993ರ ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸ ಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಎಂ.ರಾಜಶೇಖರ ಮೂರ್ತಿ(ಕಂದಾಯ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕ ರಾಜ್ಯದಲ್ಲಿ ಖನಿಜ ಸಂಪತ್ತು ಬಹಳ ಹೇರಳವಾಗಿದೆಯೆಂಬುದು ಎಲ್ಲರಿಗೂ ತಿಳಿದಂಥ ವಿಚಾರವಾಗಿದೆ. ಅದರಲ್ಲೂ ಅತಿಮುಖ್ಯವಾದ ಖನಿಜ ಸಂಪತ್ತೆಂದರೆ ಚಿನ್ನ, ಕಬ್ಬಿಣ, ಮ್ಯಾಂಗನೀಸ್ ಇವು ಮೇಜರ್ ಮಿನರಲ್ಸ್. ಹಾಗೆಯೇ ಗ್ರಾನೈಟ್, ಲೈಮ್‌ಸ್ಟೋನ್ ಇನ್ನಿತರ ಸಣ್ಣಪುಟ್ಟ ಖನಿಜಗಳು ಮೈನರ್ ಮಿನರಲ್ಸ್ ಕೆಲಗಡೆ ಬರುತ್ತವೆ. ಇವೊತ್ತು ಇಲ್ಲಿ ಮಂಡಿಸಿರುವಂಥ ಮಸೂದೆ ಏನಿದೆ, ಇದು ಕೇವಲ ಮೈನರ್ ಮಿನರಲ್ಸ್‌ಗೆ ಸೀಮಿತವಾಗಿರತಕ್ಕಂಥಾದ್ದು ಎಲ್ಲಾ ಕಡೆ ಪರಿಸ್ಥಿತಿ ಏನಾಗಿದೆ ಎಂದರೆ ಕಾನೂನಿಗೆ ವಿರುದ್ಧವಾಗಿ quarrying operations ನಡೆಯುತ್ತಿದೆ. ಅದು ಖಾಸಗಿ ಭೂಮಿ ಇರಲಿ ಸರ್ಕಾರದ ಭೂಮಿ ಇರಲಿ ಎರಡೂ ಕಡೆಯ ಭೂಮಿಯಲ್ಲಿ ಅಕ್ರಮವಾಗಿ ಸಾಗಾಣಿಕೆ ನಡೆಯುತ್ತಿದೆ. ಅದಲ್ಲದ ಸರ್ಕಾರಕ್ಕೆ ರಾಯಲ್ಟಿ ಬರುತ್ತಿಲ್ಲ. ಇದರ ಬಗ್ಗೆ ಹಿಂದೆ ಅನೇಕ ರೀತಿಯಲ್ಲಿ ಕಾನೂನನ್ನು ತಿದ್ದುಪಡಿ ಮಾಡಿದ್ದುದು ಆಯಿತು, ಯಾರಿಗೆ ತೊಂದರೆಯಾಯಿತು ಅವರುಗಳು ಕೋರ್ಟಿಗೆ ಹೋಗಿ ಅಲ್ಲಿ ರಿಟ್ ಪಿಟಿಷನ್ ಫೈಲ್ ಮಾಡಿದರು, ಆಗ 1987ರಲ್ಲಿ ಕಾಳೇಗೌಡರ ಒಂದು ಜಡ್ಜ್‌ಮೆಂಟ್ ಕೂಡ ಬಂತು. ಅದರಲ್ಲಿ ಏನು ಹೇಳುತ್ತಾರೆಂದರೆ,

When the petitioners are private land owners, if they are quarrying,they shall not be obstructed by the officers of the State in any manner, nor have the officers